# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174-ಹೆಚ್.ಎಸ್.ಆರ್ ಬಡಾವಣೆ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ವಲಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೊಮ್ಮನಹಳ್ಳಿ ವಲಯ ರವರ ಕಛೇರಿ ಆದೇಶ ಸಂಖ್ಯೆ: ವ.ಆ(ಬೊ.ವ)ಪಿ.ಆರ್/364/2022-23, ದಿನಾಂಕ: 01.07.2022 ರಂತೆ ಶ್ರೀಮತಿ ವಿಜಯಲಕ್ಷ್ಮೀ, ಕಂದಾಯ ಅಧಿಕಾರಿಗಳು, ಬೊಮ್ಮನಹಳ್ಳಿ ವಲಯ ರವರಿಗೆ ವಾರ್ಡ್ ಸಂಖ್ಯೆ: 174-ಹೆಚ್.ಎಸ್.ಆರ್ ಬಡಾವಣೆಯ ನೋಡಲ್ ಅಧಿಕಾರಿಯಾಗಿ ನೇಮಿಸಿರುತ್ತಾರೆ. ಅದರಂತೆ **ದಿನಾಂಕ: 05.11.2022** ಶನಿವಾರ ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿ 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, ಸೆಕ್ಟರ್-6, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು-560102ರಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತವೆ.

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸಾರ್ವಜನಿಕರು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಲಾಯಿತು.(ಸಭೆಗೆ ಹಾಜರಾಗಿದ್ದ, ಅಧಿಕಾರಿಗಳು ಮತ್ತು ವಾರ್ಡ್ ಸದಸ್ಯರು & ಕಲ್ಯಾಣ ಸಂಘದ ಸದಸ್ಯರುಗಳ ಹಾಜರಾತಿ ಲಗತ್ತಿಸಿದೆ).

### I. <u>ಗೋವಿಂದ ಸ್ವಾಮಿ, ಅಧ್ಯಕ್ಷಕರು, 1ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ</u>

1. 1ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆಯ ಪ್ರದೇಶದಲ್ಲಿ ಒಟ್ಟು 212 ಖಾಲಿ ನಿವೇಶನಗಳು ಇದ್ದು, ಈ ಖಾಲಿ ನಿವೇಶನಗಳಲ್ಲಿ ರಾತಿ ಕಸಗಳು, ಗಿಡಗಂಟೆಗಳು, ಇಲಿ, ಹಾವುಗಳು ಹಾಗೂ ಹಂದಿಗಳಿಂದ ಅಕ್ಕ ಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು, ಖಾಲಿ ನಿವೇಶನಗಳ ಮಾಲೀಕರಿಗೆ ಜಾಗವನ್ನು ಸ್ವಚ್ಛಗೊಳಿಸುವಂತೆ ಹಿಂದಿನ ಹಲವು ಸಭೆಗಳಲ್ಲಿ ಪ್ರಾಸ್ತಾಪಿಸಿದ್ದು, ಇದುವರೆಗೂ ಕ್ರಮಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ಗೋವಿಂದ ಸ್ವಾಮಿ, ಅಧ್ಯಕ್ಷಕರು 1ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಆಕ್ಷೇಪಿಸಿರುತ್ತಾರೆ.
   **ಕ್ರಮ : ಸಹಾಯಕ ಕಂದಾಯ ಅಧಿಕಾರಿಗಳು (ಹೆಚ್.ಎಸ್.ಆರ್)**
2. 1ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆಯ ಪ್ರದೇಶದಲ್ಲಿ ಹಾದಗೆಟ್ಟಿರುವ ರಸ್ತೆಗಳನ್ನು ಅಧ್ಯತೆ ಮೇರಿಗೆ ಡಾಂಬರೀಕರಣ ಮಾಡಿಸುವಂತೆ ಹಾಗೂ 20ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆಯ ಚರಂಡಿಯಲ್ಲಿ ಹೊಳೆತ್ತಲು ಶ್ರೀ ಗೋವಿಂದ ಸ್ವಾಮಿ, ಅಧ್ಯಕ್ಷಕರು 1ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಕೋರಿರುತ್ತಾರೆ
   **ಕ್ರಮ : ಸಹಾಯಕ ಅಭಿಯಂತರರು (ಹೆಚ್.ಎಸ್.ಆರ್)**
3. ಹಿಂದಿನ ಸಭೆಗಳಲ್ಲಿ ಚರ್ಚಿಸಿದಂತೆ ಒಣಗಿರುವ ಮರಗಳನ್ನು ವಾಹನ ಸವಾರರಿಗೆ ತಗಲುವ ರೆಂಬೆಗಳನ್ನು ಹಾಗೂ ವಿದ್ಯುತ್ ಕಂಬಗಳಿಗೆ ತಾಗಿರುವ ಮರದ ರೆಂಬೆಗಳನ್ನು ಕತ್ತರಿಸುವಂತೆ ಪ್ರಸ್ತಾಪಿಸಿದ್ದು, ಅರಣ್ಯ ಇಲಾಖೆಯಿಂದ ಇದುವರೆಗೂ ಕ್ರಮಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ಗೋವಿಂದ ಸ್ವಾಮಿ, ಅಧ್ಯಕ್ಷಕರು 1ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಆಕ್ಷೇಪಿಸಿರುತ್ತಾರೆ.
   **ಕ್ರಮ: ಅರಣ್ಯ ವಲಯ ಅಧಿಕಾರಿಗಳು (ಅರಣ್ಯ ಇಲಾಖೆ)**
4. ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಸೆಕ್ಟರ್ 1 ರ ಒಟ್ಟು 6 ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಹಾಗೂ ವಿನಾಯಕ & ನೇತ್ರಾವತಿ ಉದ್ಯಾನವನಗಳಲ್ಲಿ ವಾಕ್ಕಿಂಗ್ ಟ್ರ್ಯಾಕ್, ವ್ಯಾಯಾಮ ಸಾಮಾಗ್ರಿಗಳು ಹಳೆಯದಾಗಿದ್ದು, ಅವುಗಳನ್ನು ತೆರವುಗೊಳಿಸಿ ಹೊಸದಾಗಿ ಅಳವಡಿಸುವಂತೆ ಶ್ರೀ ಗೋವಿಂದ ಸ್ವಾಮಿ, 1ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.
   **ಕ್ರಮ: ತೋಟಗಾರಿಕೆ ಅಧೀಕ್ಷಕರು (ಬೊಮ್ಮನಹಳ್ಳಿ ವಲಯ)**
5. 1ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆಯಲ್ಲಿ ಬೀದಿ ದೀಪಗಳಿಗೆ ಟೈಮರ್ ಅಳವಡಿಸಿದ್ದು, ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತಿಲ್ಲವೆಂದು ಶ್ರೀ ಗೋವಿಂದ ಸ್ವಾಮಿ, 1ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.
   **ಕ್ರಮ: ಸಹಾಯಕ ಅಭಿಯಂತರರು, (ವಿದ್ಯುತ್ ವಿಭಾಗ)**

(2.....)

Scanned with

6. 1ನೇ ಸೆಕ್ಟರ್, ವ್ಯಾಪ್ತಿಯ ರಾಜಕಾಲುವೆಗಳಲ್ಲಿ ಹೂಳೆತ್ತುವಂತೆ ಶ್ರೀ ಗೋವಿಂದ ಸ್ವಾಮಿ, 1ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

**ಕ್ರಮ: ಸಹಾಯಕ ಅಭಿಯಂತರರು, (ಬೃಹತ್ ಮಳೆ ನೀರುಗಾಲುವೆ).**

7. 1ನೇ ಸೆಕ್ಟರ್ ಪ್ರದೇಶದ ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆಗಳಲ್ಲಿ ನಾಮಫಲಕಗಳನ್ನು ಅಳವಡಿಸುವಂತೆ ಶ್ರೀ ಗೋವಿಂದ ಸ್ವಾಮಿ, 1ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

**ಕ್ರಮ: ಸಹಾಯಕ ಅಭಿಯಂತರರು. (ಕಾಮಗಾರಿ)**

## 2. <u>ಗೋಪಾಲ ಕೃಷ್ಣ, ಅಧ್ಯಕ್ಷಕರು 2ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ :-</u>

1. 2ನೇ ಸೆಕ್ಟರ್ ಹೆಚ್.ಎಸ್.ಆರ್ ಬಡಾವಣೆ, 17ನೇ ಅಡ್ಡ ರಸ್ತೆ, 19ನೇ ಮುಖ್ಯ ರಸ್ತೆ, 24ನೇ ಮುಖ್ಯ ರಸ್ತೆ, 27ನೇ ಮುಖ್ಯ ರಸ್ತೆ ಪಾದಚಾರಿ ಮಾರ್ಗಗಳಲ್ಲಿ ತಳ್ಳುವಗಾಡಿ, ವಾಣಿಜ್ಯ ಅಂಗಡಿಯ ಮುಂಭಾಗ ಸಾರ್ವಜನಿಕರಿಗೆ ಓಡಾಡದಂತೆ ಪಾದಚಾರಿ ಮಾರ್ಗ ಮತ್ತು ತೆರದ ಚರಂಡಿಗಳ ಮೇಲೆ ಕಾಂಕ್ರೀಟ್ ಹಾಕಿ ಕಟ್ಟಿಲಾದ ಕಂಬಗಳಿಗೆ ಲೈಟ್‌ಗಳನ್ನು ಅಳವಡಿಸಿಕೊಂಡಿದ್ದು, ಇವುಗಳನ್ನು ತೆರುವುಗೊಳಿಸುವಂತೆ ಸಭೆಯಲ್ಲಿ ಶ್ರೀ ಗೋಪಾಲ್ ಕೃಷ್ಣ ಕ್ಷೇಮಾಭಿವೃದ್ಧಿ ಸಂಘ ರವರು ಪ್ರಸ್ತಾಪಿಸಿದರು.

**ಕ್ರಮ ಹಿರಿಯ ಆರೋಗ್ಯ ಪರಿವೀಕ್ಷಕರು ವಾ.ಸಂ.174**

2. 2ನೇ ಸೆಕ್ಟರ್‌ನ ಹದಗೆಟ್ಟಿರುವ ರಸ್ತೆಗಳನ್ನು ಆದ್ಯತೆ ಮೇರೆಗೆ ಡಾಂಬರೀಕರಣ ಗೊಳಿಸುವಂತೆ ಹಾಗೂ ರಸ್ತೆ ಗುಂಡಿಗಳನ್ನು ಮುಚ್ಚಿಸುವಂತೆ, ಚರಂಡಿಗಳಲ್ಲಿ ಹೂಳೆತ್ತುವಂತೆ ಸಭೆಯಲ್ಲಿ ಶ್ರೀ ಗೋಪಾಲ್ ಕೃಷ್ಣ, 2ನೇ ಕ್ಷೇಮಾಭಿವೃದ್ಧಿ ಸಂಘ ಪ್ರಸ್ತಾಪಸಿದರು.

**ಕ್ರಮ : ಸ.ಕಾ.ಅ. (ಹೆಚ್.ಎಸ್.ಆರ್) ಕಾಮಗಾರಿ.**

3. ಹೆಚ್.ಎಸ್.ಆರ್ ಬಡಾವಣೆ, 2ನೇ ಸೆಕ್ಟರ್ ಕೆಲವು ರಸ್ತೆಗಳ ಪಾದಚಾರಿ ಮಾರ್ಗದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಅಳವಡಿಸಿದ್ದು, ಇವುಗಳನ್ನು ತೆರವುಗೊಳಿಸುವಂತೆ ಶ್ರೀ ಗೋಪಾಲ್ ಕೃಷ್ಣ, 2ನೇ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಸಿದರು

**ಕ್ರಮ: ಸಹಾಯಕ ಅಭಿಯಂತರರು, (ಬೆಸ್ಕಾಂ)**

4. ಹೆಚ್.ಎಸ್.ಆರ್. ಬಡಾವಣೆ, 2ನೇ ಸೆಕ್ಟರ್‌ನ ಪ್ರದೇಶದ ಉದ್ಯಾನವನಗಳಲ್ಲಿ ಭದ್ರತಾ ಸಿಬ್ಬಂದಿ ವರ್ಗದವರಿಗೆ ಶೌಚಾಲಯ ವ್ಯವಸ್ಥೆ ಇರುವುದಿಲ್ಲ ಹಾಗೂ ಸ್ವಾತಂತ್ರ ಉದ್ಯಾನವನವನ್ನು ಅಲಂಕಾರಗೊಳಿಸಲು (Beautyfication) ಹಾಗೂ ಉದ್ಯಾನದನ ಸಿಬ್ಬಂದಿ ವರ್ಗದವರಿಗೆ ಮಾಹೇವಾರು ಸಂಬಳವನ್ನು ನೇರವಾಗಿ ಉಳಿತಾಯ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕೆಂದು ಸಭೆಯಲ್ಲಿ ಶ್ರೀ ಗೋಪಾಲ್ ಕೃಷ್ಣ, 2ನೇ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಸಿದರು

**ಕ್ರಮ : ತೋಟಗಾರಿಕೆ ಅಧೀಕ್ಷಕರು. (ಬೊಮ್ಮನಹಳ್ಳಿ ವಲಯ)**

## 3. <u>ಸಿ. ನರೇಂದ್ರ ಬಾಬು, ಕಾರ್ಯದರ್ಶಿ, (3ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ) :-</u>

1. ಹಿಂದಿನ ಹಲವು ಸಭೆಗಳಲ್ಲಿ 3ನೇ ಸೆಕ್ಟರ್‌ನ 17ನೇ ಮುಖ್ಯ ರಸ್ತೆ ಎಡ ಮತ್ತು ಬಲ ಭಾಗದ ಚರಂಡಿಯ Shoulder Drain ನಲ್ಲಿ ತುಂಬಿಕೊಂಡಿರುವ ಹೂಳನ್ನು ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕರಿಗೆ ಸುಗುಮವಾಗಿ ಓಡಾಡುವಂತೆ ಅನುವು ಮಾಡಿಕೊಡಲು ಸಭೆಯಲ್ಲಿ ಪ್ರಸ್ತಾಪಿಸಿದರು ಸಹ ಇದುವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಶ್ರೀ ಸಿ.ನರೇಂದ್ರ ಬಾಬು, 3ನೇ ಕ್ಷೇಮಾಭಿವೃದ್ಧಿ ಸಂಘ ರವರು ಆಕ್ಷೇಪಿಸಿರುತ್ತಾರೆ.

**ಕ್ರಮ: ಸ.ಕಾ.ಅ. (ಕಾಮಗಾರಿ)**

2. ಹಿಂದಿನ ಹಲವು ಸಭೆಗಳಲ್ಲಿ 3ನೇ ಸೆಕ್ಟರ್‌ನ 26ನೇ ಅಡ್ಡ ರಸ್ತೆ, 17ನೇ ಮುಖ್ಯ ರಸ್ತೆ, ಸರ್ಕಾರಿ ಶಾಲೆಯ ಹತ್ತಿರ ಸ್ಮಶಾನದ ಕಾಂಪೌಂಡ್ ಗೋಡೆಯನ್ನು ನಿರ್ಮಿಸುವಂತೆ ಹಲವು ಬಾರಿ ಅರ್ಜಿಯನ್ನು ನೀಡಿದರು ಏನು ಕ್ರಮ ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ಆಕ್ಷೇಪಿಸಿ ಕಾಂಪೌಂಡ ಗೋಡೆಯನ್ನು ಆದ್ಯತೆಯ ಮೇರಿಗೆ ಕೈಗೊಳ್ಳಲು ಸಭೆಯಲ್ಲಿ ಪ್ರಸ್ತಾಪಿಸಿದರು ಸಹ ಇದುವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಶ್ರೀ ಸಿ.ನರೇಂದ್ರ ಬಾಬು, 3ನೇ ಕ್ಷೇಮಾಭಿವೃದ್ಧಿ ಸಂಘ ರವರು ಆಕ್ಷೇಪಿಸಿರುತ್ತಾರೆ.

**ಕ್ರಮ. ಸ.ಕಾ.ಅ. (ಯೋಜನೆ ವಿಭಾಗ)**

3. 3ನೇ ಸೆಕ್ಟರ್ 26ನೇ ಅಡ್ಡ ರಸ್ತೆ, 17ನೇ ಮುಖ್ಯ ರಸ್ತೆ, ಚರಂಡಿಗಳಲ್ಲಿ ನೀರು ಹರಿಯದೆ ರಸ್ತೆಯ ಮೇಲ್ಭಾಗದಲ್ಲಿ ಹರಿಯುತ್ತಿರುವುದರಿಂದ ಸಾರ್ವಜನಿಕ ಸಂಚಾರಕ್ಕೆ ಅಡಚಣೆಯಾಗಿದ್ದು, ಶ್ರೀಘ್ರವಾಗಿ ಚರಂಡಿ ಕಾಮಗಾರಿ ಕೈಗೆತ್ತಿಕೊಳ್ಳಲು ಸಭೆಯಲ್ಲಿ ಪ್ರಸ್ತಾಪಿಸಿದರು.

**ಕ್ರಮ: ಸ.ಕಾ.ಅ. ಹೆಚ್.ಎಸ್.ಆರ್ (ಕಾಮಗಾರಿ)**

(3...)

Scanned with

4. 3ನೇ ಸೆಕ್ಟರ್ 19ನೇ ಮುಖ್ಯ ರಸ್ತೆ, (ಸೇವಾ ರಸ್ತೆ) ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಹತ್ತಿರ, ಖಾಸಗಿ ವಾಹನಗಳು ನಿಲ್ಲಿಸುತ್ತಿದ್ದು, ಇವುಗಳನ್ನು ನಿಲ್ಲಿಸದಂತೆ ಕ್ರಮ ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು
   **ಕ್ರಮ : ಪೋಲಿಸ್ ಇನ್ಸ್‌ಪೆಕ್ಟರ್, ಸಂಚಾರಿ ಪೋಲಿಸ್ ಠಾಣೆ (ಇಬ್ಬಲೂರು)**
5. 3ನೇ ಸೆಕ್ಟರ್ ಪ್ರದೇಶದ ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆಗಳಲ್ಲಿ ನಾಮಫಲಕಗಳನ್ನು ಅಳವಡಿಸುವಂತೆ ಶ್ರೀ ಸಿ.ನರೇಂದ್ರ ಬಾಬು, 3ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.
   **ಕ್ರಮ: ಸಹಾಯಕ ಅಭಿಯಂತರರು, ಕಾಮಗಾರಿ**
6. 3ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆ ಸ್ವಾಭಿಮಾನ್ ಉದ್ಯಾನವನದ ಮುಖ್ಯ ದ್ವಾರವು 2 ವರ್ಷದ ಹಿಂದೆ ಕೆಡವಿದ್ದು, ಇದುವರೆಗೂ ಪುನರ್ ನಿರ್ಮಿಸಲು ಕ್ರಮ ಕೈಗೊಂಡಿರುವುದಿಲ್ಲವೆಂದು ಹಾಗೂ ಗ್ರೀನ್ ಪಾರ್ಕ್ ಉದ್ಯಾನವನದಲ್ಲಿ ನವೀಕರಣಗೊಳಿಸಲು, 18ನೇ ಮುಖ್ಯ ರಸ್ತೆ ಫ್ರೆಂಡ್ಸ್ ಪಾರ್ಕ್‌ನಲ್ಲಿ ತಂತಿಬೇಲಿ ಮತ್ತು ಕೊಳವೆ ಭಾವಿ ಕೊರೆಸುವಂತೆ ಸಭೆಯಲ್ಲಿ ಶ್ರೀ ಸಿ.ನರೇಂದ್ರ ಬಾಬು, 3ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.
   **ಕ್ರಮ : ತೋಟಗಾರಿಕೆ ಅಧೀಕ್ಷಕರು.**

**4. <u>ವಿಜಯಲಕ್ಷ್ಮೀ (4ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ)</u>**

1. 4ನೇ ಸೆಕ್ಟರ್‌ನ ಫ್ರೀಡಂ ಇಂಟರ್‌ನ್ಯಾಷನಲ್ ಶಾಲೆಯ ಹತ್ತಿರ, ಚರಂಡಿಯಲ್ಲಿ ನೀರು ಹರಿಯದೆ ರಸ್ತೆಯ ಮೇಲ್ಭಾಗದಲ್ಲಿ ಹರಿಯುತ್ತಿರುವುದರಿಂದ ಸಾರ್ವಜನಿಕ ಸಂಚಾರಕ್ಕೆ ಅಡಚಣೆಯಾಗುತ್ತಿದ್ದು, ಕೂಡಲೇ ಚರಂಡಿ ದುರಸ್ಥಿ ಪಡಿಸುವಂತೆ ಸಭೆಯಲ್ಲಿ ಶ್ರೀಮತಿ ವಿಜಯಲಕ್ಷ್ಮೀ ಅಧ್ಯಕ್ಷರು (4ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ) ರವರು ಸಭೆಯಲ್ಲಿ ಪ್ರಸ್ತಾಪಿಸಿದರು.
   **ಕ್ರಮ : ಸಹಾಯಕ ಅಭಿಯಂತರರು, ಕಾಮಗಾರಿ**
2. 4ನೇ ಸೆಕ್ಟರ್‌ನ ಆಕ್ಸ್‌ಫರ್ಡ್ ಶಾಲೆಯ ಮುಂಭಾಗ ವಾಣಿಜ್ಯ ಚಟುವಟಿಕೆ ಮಧ್ಯರಾತ್ರಿವರೆಗೂ ನಡೆಸುತ್ತಿದ್ದು, ಇದರಿಂದ ಅಕ್ಕ ಪಕ್ಕದ ನಿವಾಸಿಗಳಿಗೆ ತುಂಬ ತೊಂದರೆಯಾಗುತ್ತಿರುವುದಾಗಿ ಶ್ರೀಮತಿ ವಿಜಯಲಕ್ಷ್ಮೀ ಅಧ್ಯಕ್ಷರು (4ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ) ರವರು ಸಭೆಯಲ್ಲಿ ಪ್ರಸ್ತಾಪಿಸಿದರು.
3. 4ನೇ ಸೆಕ್ಟರ್, 19ನೇ ಮುಖ್ಯ ರಸ್ತೆಯಲ್ಲಿ ಖಾಸಿಗೆ ಕಂಪನಿಯ ವಾಹನಗಳನ್ನು, ಶಾಲೆ & ಕಾಲೇಜುಗಳ ವಾಹನಗಳನ್ನು ನಿಲ್ಲಿಸುತ್ತಿದ್ದು, ಸ್ಥಳೀಯರಿಗೆ ಮತ್ತು ಸಾರ್ವಜನಿಕರಿಗೆ ಓಡಾಡಲು ಕಷ್ಟವಾಗುತ್ತಿರುವುದಾಗಿ ಶ್ರೀಮತಿ ವಿಜಯಲಕ್ಷ್ಮೀ ಅಧ್ಯಕ್ಷರು (4ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ) ರವರು ಪ್ರಸ್ತಾಪಿಸಿದರು.
4. 4ನೇ ಸೆಕ್ಟರ್, 15ನೇ ಅಡ್ಡ ರಸ್ತೆಯ ಉದ್ಯಾನವನದಲ್ಲಿ ವ್ಯಾಯಾಮ ಸಾಮಾಗ್ರಿಗಳು ಹಾಗೂ ಮಕ್ಕಳ ಆಟದ ಸಾಮಾಗ್ರಿಗಳು ಇಲ್ಲದಿರುವುದರಿಂದ ಅದ್ಯತೆ ಮೇರಿಗೆ ಈ ಉದ್ಯಾನವನದಲ್ಲಿ ಅಳವಡಿಸಲು ಶ್ರೀಮತಿ ವಿಜಯಲಕ್ಷ್ಮೀ ಅಧ್ಯಕ್ಷರು (4ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ) ರವರು ಸಭೆಯಲ್ಲಿ ಪ್ರಸ್ತಾಪಿಸಿದರು.

**5. <u>ಪದ್ಮಶ್ರೀ ಮಹೇಶ್ (7ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ):</u>**

1. 7ನೇ ಸೆಕ್ಟರ್, ಪ್ರದೇಶಗಳ ರಸ್ತೆಗಳು ಹದಗೆಟ್ಟಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿದ್ದು, ಆದ್ದರಿಂದ ರಸ್ತೆಗಳ ಡಾಂಬರೀಕರಣಗೊಳಿಸುವಂತೆ ಶ್ರೀಮತಿ ಪದ್ಮಶ್ರೀ ಮಹೇಶ್, 7ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. **ಕ್ರಮ. ಸ.ಅ. ವಾರ್ಡ್ ಸಂ. 174**
2. 7ನೇ ಸೆಕ್ಟರ್ ವ್ಯಾಪ್ತಿಗೆ ಒಳಪಡುವ ಪ್ರದೇಶದ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದ್ದು, ನೀರು ಸರಾಗವಾಗಿ ಹರಿಯದೆ ಇರುವುದರಿಂದ ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳೆತ್ತಲು ಹಾಗೂ ಕೆಲವು ರಸ್ತೆಗಳಲ್ಲಿ ಕಲ್ವರ್ಟ್ ನಿರ್ಮಿಸುವಂತೆ ಸಭೆಯಲ್ಲಿ ಶ್ರೀಮತಿ ಪದ್ಮಶ್ರೀ ಮಹೇಶ್, 7ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. **ಕ್ರಮ. ಸ.ಅ. ವಾರ್ಡ್ ಸಂ. 174**
3. 7ನೇ ಸೆಕ್ಟರ್, ಪ್ರದೇಶದ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗದ ಕಟ್ಟಡ ನಿರ್ಮಾಣದ ಸಾಮಾಗ್ರಿಗಳು, ಅನುಪಯುಕ್ತ ವಸ್ತುಗಳು ಹಾಗೂ ರಸ್ತೆಯ ಬದಿಯಲ್ಲಿರುವ ಡ್ರೆಬಿಸ್ ತೆರವುಗೊಳಿಸಿ ಸಾರ್ವಜನಿಕ ಓಡಾಡಕ್ಕೆ ಅನುಕೂಲ ಮಾಡಿಕೊಡುವಂತೆ ಸಭೆಯಲ್ಲಿ ಶ್ರೀಮತಿ ಪದ್ಮಶ್ರೀ ಮಹೇಶ್, 7ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. **ಕ್ರಮ. ಸ.ಅ. ವಾರ್ಡ್ ಸಂ. 174**

(4......)

Scanned with

4. 7ನೇ ಸೆಕ್ಟರ್, ಶ್ರೀರಂಗಂ ಸರ್ಕಲ್ ಹತ್ತಿರ, ರಾಜಕಾಲುವೆಗೆ ಕವರಿಂಗ್ ಸ್ಲ್ಯಾಬ್/ಸಿಮೆಂಟ್
ಕಾಂಕ್ರೀಟ್‌ಯಿಂದ ಮುಚ್ಚುವಂತೆ ಸಭೆಯಲ್ಲಿ ಶ್ರೀಮತಿ ಪದ್ಮಶ್ರೀ ಮಹೇಶ್, 7ನೇ ಸೆಕ್ಟರ್ ಕ್ಷೇಮಾಭಿವೃದ್ಧಿ
ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. **ಕ್ರಮ. ಸ.ಅ. ಬೃಹತ್ ನೀರುಗಾಲುವೆ**

5. 7ನೇ ಸೆಕ್ಟರ್ ಪ್ರದೇಶದ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆಯಿಂದ ಮರದ ರೆಂಬೆಗಳನ್ನು ಕತ್ತರಿಸಿ ಸ್ಥಳದಲಿಯೇ
ಶೇಖರಿಸಿರುತ್ತಾರೆ. ಇದನ್ನು ತೆರವುಗೊಳಸಲುವಂತೆ ಸಭೆಯಲ್ಲಿ ಶ್ರೀಮತಿ ಪದ್ಮಶ್ರೀ ಮಹೇಶ್, 7ನೇ ಸೆಕ್ಟರ್
ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. **ಕ್ರಮ. ಸ.ಅ. ಬೆಸ್ಕಾಂ**

6. ೫ನೇ ಮತ್ತು ೯ನೇ ಮುಖ್ಯ ರಸ್ತೆಯ ರಾಜಕಾಲುವೆಯ ಮೇಲೆ ಹಾಗೂ 18ನೇ ಅಡ್ಡ ರಸ್ತೆ ಚಾಯ
ಪಾಯಿಂಟ್ ಹತ್ತಿರ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಪಾದಚಾರಿ ಮಾರ್ಗದ ಮೇಲೆ
ಓಡಾಡಲು ಅನಾನುಕೂಲವಾಗಿದ್ದು, ವಾಹನಗಳನ್ನು ರಾಜಕಾಲುವೆ ಮೇಲ್ಭಾಗದಲ್ಲಿ ನಿಲ್ಲಿಸದಂತೆ ಕ್ರಮ
ವಹಿಸಲು ಸಭೆಯಲ್ಲಿ ಶ್ರೀಮತಿ ಪದ್ಮಶ್ರೀ ಮಹೇಶ್, 7ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ರವರು ಸಭೆಯಲ್ಲಿ
ಪ್ರಸ್ತಾಪಿಸಿರುತ್ತಾರೆ. ಕ್ರಮ: **ಪೋಲಿಸ್ ಇನ್ಸ್‌ಪೆಕ್ಟರ್, ಸಂಚಾರಿ ಪೋಲಿಸ್ ಠಾಣೆ**

7. ೫ನೇ ಮತ್ತು ೯ನೇ ಮುಖ್ಯ ರಸ್ತೆಯಲ್ಲಿ ಪೋಲಿಸ್ ಇಲಾಖೆಯಿಂದ Night Patrolling Point
ಗುರುತಿಸುವಂತೆ ಕ್ರಮ ವಹಿಸಲು ಸಭೆಯಲ್ಲಿ ಶ್ರೀಮತಿ ಪದ್ಮಶ್ರೀ ಮಹೇಶ್, 7ನೇ ಸೆಕ್ಟರ್ ಕ್ಷೇಮಾಭಿವೃದ್ಧಿ
ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. ಕ್ರಮ: **ಪೋಲಿಸ್ ಇನ್ಸ್‌ಪೆಕ್ಟರ್, ಹೆಚ್.ಎಸ್.ಆರ್ ಪೋಲಿಸ್
ಠಾಣೆ**

8. 7ನೇ ಸೆಕ್ಟರ್, ಪ್ರದೇಶದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ 5 ರಿಂದ 6 ದಿನಕ್ಕೊಮ್ಮೆ ನೀರು
ಬಿಡುತ್ತಿದ್ದು, ಇದರಿಂದ ಸ್ಥಳೀಯ ನಿವಾಸಿಗಳಿಗೆ ಸಮಸ್ಯೆಯಾಗುತ್ತಿದ್ದು, 3 ರಿಂದ 4 ದಿನಕ್ಕೊಮ್ಮೆ ನೀರು
ಬಿಡುವಂತೆ ಕ್ರಮ ವಹಿಸಬೇಕೆಂದು ಸಭೆಯಲ್ಲಿ ಶ್ರೀಮತಿ ಪದ್ಮಶ್ರೀ ಮಹೇಶ್, 7ನೇ ಸೆಕ್ಟರ್ ಕ್ಷೇಮಾಭಿವೃದ್ಧಿ
ಸಂಘ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. **ಕ್ರಮ: ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ**

## 6. ಚಂದ್ರಶೇಖರ ಹೆಚ್.ಇ (ವಾರ್ಡ್ ಸದಸ್ಯರು)

1. ಹೆಚ್.ಎಸ್.ಆರ್ ಬಡಾವಣೆಯ 19ನೇ ಮುಖ್ಯ ರಸ್ತೆಯಲ್ಲಿ 4 ರಸ್ತೆ ಗುಂಡಿಗಳಿದ್ದು, ಇವುಗಳನ್ನು
ಮುಚ್ಚಿಸುವಂತೆ ಕ್ರಮ ವಹಿಸಲು ಸಭೆಯಲ್ಲಿ ಶ್ರೀ ಚಂದ್ರಶೇಖರ ಸದಸ್ಯರು ಪ್ರಸ್ತಾಪಿಸಿರುತ್ತಾರೆ.
**ಕ್ರಮ ಸ.ಅ. ವಾರ್ಡ್ ಸಂ. 174**

2. ಹೆಚ್.ಎಸ್.ಆರ್ ಬಡಾವಣೆಯ ವ್ಯಾಪ್ತಿಯ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಪಾದಚಾರಿ ಮಾರ್ಗದ
ಮೇಲೆ ಇದ್ದು, ಸಾರ್ವಜನಿಕರಿಗೆ ಪಾದಚಾರಿ ಮಾರ್ಗದ ಮೇಲೆ ಓಡಾಡಲು ಅಡಚಣೆಯಾಗುತ್ತಿದ್ದು,
ಇವುಗಳನ್ನು ಸ್ಥಳಾಂತರಗೊಳಸುವಂತೆ ಸಭೆಯಲ್ಲಿ ಶ್ರೀ ಚಂದ್ರಶೇಖರ ಸದಸ್ಯರು ಪ್ರಸ್ತಾಪಿಸಿರುತ್ತಾರೆ.
**ಕ್ರಮ ಸ.ಅ. ಬೆಸ್ಕಾಂ**

3. 24ನೇ ಮುಖ್ಯ ರಸ್ತೆ ಪರಂಗಿಪಾಳ್ಯ, ಪಾದಚಾರಿ ಮಾರ್ಗದ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಲು
ಸರ್ಕಾರದಿಂದ ಅಧಿಸೂಚನೆ ಹೊರಡಿಸಿರುತ್ತಾರೆ. ಆದರೆ ಇದುವರೆಗೂ ಪೋಲಿಸ್ ಸಂಚಾರಿ ವಿಭಾಗದಿಂದ
ವಾಹನಗಳನ್ನು ನಿಲ್ಲಿಸುವ ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲವೆಂದು ಶ್ರೀ ಚಂದ್ರಶೇಖರ ಸದಸ್ಯರು
ಪ್ರಸ್ತಾಪಿಸಿರುತ್ತಾರೆ. ಕ್ರಮ: **ಪೋಲಿಸ್ ಇನ್ಸ್‌ಪೆಕ್ಟರ್, ಹೆಚ್.ಎಸ್.ಆರ್ ಪೋಲಿಸ್ ಠಾಣೆ**

4. ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯ ಪಾದಚಾರಿ ಮಾರ್ಗದ ಮೇಲೆ ಬೆಸ್ಕಾಂ ಇಲಾಖೆಯಿಂದ
(ಆರ್.ಎಂ.ವಿ. ಬಾಕ್ಸ್) ಅಳವಡಿಸಿದ್ದು, ಇವುಗಳನ್ನು ತೆರವುಗೊಳಸಲು ಸಭೆಯಲ್ಲಿ ಶ್ರೀ ಚಂದ್ರಶೇಖರ
ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆರ್.ಎಂ.ವಿ. ಬಾಕ್ಸ್ ಸ್ಥಳಾಂತರಿಸಲು ಕ್ರಮ
ವಹಿಸಲಾಗುವುದೆಂದು ಬೆಸ್ಕಾಂ ಕಿ.ಅ. ರವರು ಸಭೆಯಲ್ಲಿ ತಿಳಸಿರುತ್ತಾರೆ.

5. ಹೆಚ್.ಎಸ್.ಆರ್ ಬಡಾವಣೆ, 1ನೇ ಸೆಕ್ಟರ್ ನೇತ್ರಾವತಿ ಉದ್ಯಾನವನದಲ್ಲಿ ಹಾಲಿ ಇರುವು ವ್ಯಾಯಾಮ ಮತ್ತು
ಮಕ್ಕಳ ಆಟದ ಸಾಮಾಗ್ರಿಗಳು ಹಳೆಯದಾಗಿದ್ದು, ಇವುಗಳನ್ನು ತೆರವುಗೊಳಸಿ ಹೊಸದಾಗಿ ಅಳವಡಿಸುವಂತೆ
ಶ್ರೀ ಚಂದ್ರಶೇಖರ ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. ಕ್ರಮ. **ಸ.ಕಾ.ಅ. ಯೋಜನೆ**

(೫...)

Scanned with

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 174 ಹಾಗೂ ಕಂದಾಯ ಅಧಿಕಾರಿಗಳು/ಬೊಮ್ಮನಹಳ್ಳಿ ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Rajagopalababu
ಕಾರ್ಯದರ್ಶಿ, ವಾರ್ಡ್ ನಂ.174ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ
ಕಂದಾಯ ಅಧಿಕಾರಿಗಳು/ಬೊಮ್ಮನಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ/ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಕಡತಕ್ಕೆ.

Scanned with